

ಡಾ.ರಾಜ್
ದ್ವಾರಕೀಶ್
ನರಸಿಂಹರಾಜು
ಶಿವರಾಂ



ಲೀಲಾವತಿ

2018ರ ಮಾರ್ಚ್ ಕೊನೆಯ ವೇಳೆಗೆ, ವರ್ಷದ ಮೊದಲ ಮೂರು ತಿಂಗಳಲ್ಲಿ ತೆರೆ ಕಂಡ ಕನ್ನಡ ಚಿತ್ರಗಳ ಸಂಖ್ಯೆ 54! ಇದೊಂದು ದಾಖಲೆಯೇ. ಮೊದಲ ತ್ರೈಮಾಸಿಕದಲ್ಲಿನ ಈ ಅರ್ಧಶತಕದ ತುರುಸು ಮುಂದುವರೆದದ್ದೇ ಆದರೆ, ವರ್ಷದ ಕೊನೆಗೆ ತೆರೆಕಂಡ ಕನ್ನಡ ಸಿನಿಮಾಗಳ ಸಂಖ್ಯೆ 200 ದಾಟಲಿದೆ. ಹಾಗಾದಲ್ಲಿ, ಕನ್ನಡ ಚಿತ್ರರಂಗ ವರ್ಷವೊಂದರಲ್ಲಿ ತನ್ನ ಚೊಚ್ಚಿಲ ದ್ವಿಶತಕವನ್ನು ಸಾಧಿಸಲಿದೆ. ಶತಕ ಯುಗಳದ ಸಂಭ್ರಮದ ಸಾಧ್ಯತೆಯನ್ನು ಬದಿಗಿಟ್ಟು ನೋಡಿದರೆ, ಸಂಖ್ಯಾದೃಷ್ಟಿಯಿಂದಲೇ ಕನ್ನಡ ಚಿತ್ರರಂಗ ಹೊಸದೊಂದು ಮೈಲಿಗಲ್ಲನ್ನು ಮುಟ್ಟಿದೆ. ಕಳೆದ ಮಾರ್ಚ್ 30ರಂದು, 4000 ಸಿನಿಮಾಗಳ ಮೈಲಿಗಲ್ಲನ್ನು ಕನ್ನಡ ಚಿತ್ರೋದ್ಯಮ ತಲುಪಿದೆ!

ಮಾರ್ಚ್ 30ರಂದು ತೆರೆ ಕಂಡ ನಾಲ್ಕು ಸಿನಿಮಾಗಳ ಮೂಲಕ (‘ಇದೀಗ ಬಂದ ಸುದ್ದಿ’, ‘ಗುಲ್ಟು’, ‘ಹೀಗೊಂದು ದಿನ’ ಹಾಗೂ ‘ಜಾನಿ ಜಾನಿ ಎಸ್ ಪಪ್ಪ’) ಈವರೆಗೆ ತೆರೆ ಕಂಡ ಕನ್ನಡ ಚಿತ್ರಗಳ ಸಂಖ್ಯೆ 4000 ದಾಟಿದೆ. ಯಾವುದೇ ಒಂದು ಸಾಧನೆ ಅಥವಾ ಗೌರವ, ಸಾಗಿಬಂದ ದಾರಿಯನ್ನು ಹಿಂತಿರುಗಿ ನೋಡಲು ಒಂದು ಸುಸಂದರ್ಭ. ಈ ನಿಟ್ಟಿನಲ್ಲಿ,